# ಪ್ರತಿಕಾ ಪ್ರಕಟಣೆ

ಖುಷಿ ಪರಿಸರವು ದಿನಾಂಕ : 16-03-2018 ರಂದು ಸಮುದ್ರ ಸೇರುವ ಘನ ತ್ಯಾಜ್ಯಗಳಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮುಡಿಸಲು ಕುಮಟಾದ ಅಳ್ವೆದಂಡೆ ಸಮುದ್ರತೀರದಲ್ಲಿ **ಸ್ವಚ್ಛ ಸಮುದ್ರ, ಸ್ವಸ್ಥ ಸಮುದ್ರ** ಎಂಬ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಭಾರತೀಯ ಸಂಸ್ಕೃತಿಯಲ್ಲಿ ರೂಢಿಗತವಾಗಿರುವ ನಮಗೆ ಬೇಡವೇನಿಸಿದ ವಸ್ತುಗಳನ್ನು ಭೂಮಿಯ ಮೇಲಾದರೆ ಅಗ್ನಿಸ್ಪರ್ಶ ಮಾಡುವ ಅಥವಾ ನೀರಿನಲ್ಲಿ ವಿಸರ್ಜಿಸುವ ಆಚರಣೆಗಳನ್ನು ನೆಲ, ಜಲ ಹಾಗೂ ವಾಯು ರಕ್ಷಣೆಗೊಸ್ಕರ ಬದಲಾಯಿಸಿಕೊಳ್ಳುವ ತುರ್ತು ಪರಿಸ್ಥಿತಿ ಈಗ ಒದಗಿ ಬಂದಿದೆ. ಆದ್ದರಿಂದ ಖುಷಿ ಪರಿಸರವು ನಮ್ಮ ರೂಢಿಗತ ತಪ್ಪು ಆಚರಣೆಗಳಿಂದ ದಿನಾಲು ನೀರಿನ ಹರಿವುಗಳಲ್ಲಿ, ಚರಂಡಿಗಳಲ್ಲಿ ಹಾಗೂ ನೇರವಾಗಿ ಸಮುದ್ರದಲ್ಲಿ ಬಿಸಾಡಲ್ಪಡುತ್ತಿರುವ ಕೊಳೆಯದ ತ್ಯಾಜ್ಯದ ವಿರುದ್ಧ ಹೋರಾಟ ನಡೆಸಲು ಸನ್ನದ್ಧವಾಗಿದೆ.

ಈ ಹೋರಾಟವನ್ನು ಪ್ರಾರಂಭಿಸಲು ಕಲಭಾಗ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಅಳ್ವೆದಂಡೆ ಪ್ರಶಸ್ತ ಸ್ಥಳ ಎಂಬುದು ನಮ್ಮ ನಂಬಿಕೆ. ಏಕೆಂದರೆ ಇದು ಕುಮಟಾ ಪಟ್ಟಣಕ್ಕೆ ತಾಗಿಕೊಂಡಿದ್ದು ಹೊನ್ಮಾಂವ ಬ್ರಿಡ್ಜ್, ಮೀನು ಮಾರುಕಟ್ಟೆಯ ಹತ್ತಿರದ ಬ್ರಿಡ್ಜ್, ಖಾಂಡ್ಲಾಗಳ ನಡುವೆ, ಸಮುದ್ರ ತೀರ, ಇವೆಲ್ಲ ಜನರಿಗೆ ತಮ್ಮ ತ್ಯಾಜ್ಯದಿಂದ ಮುಕ್ತಿಪಡೆಯಲು ಅನುಕೂಲಕರ ಸ್ಥಳವಾಗಿದೆ. ದಿನೇ ದಿನೇ ಸಮುದ್ರ ತಲುಪುತ್ತಿರುವ ಪ್ಲಾಸ್ಟಿಕ್ ಹಾಗೂ ಇತರೇ ಕೊಳೆಯದ ತ್ಯಾಜ್ಯದ ಪ್ರಮಾಣ ಹೆಚ್ಚುತ್ತಲೇ ಇದೆ. ನಾವೆಲ್ಲರು ತಿಳಿದಿರುವಂತೆ ಇಂತಹ ಆಚರಣೆಗಳನ್ನು ನಿಗ್ರಹಿಸಲು ಮತ್ತು ಸಮುದ್ರವನ್ನು ರಕ್ಷಿಸಲು ಕೇಂದ್ರ ಸರ್ಕಾರವು ಸೂಕ್ತ ಕಾನೂನು ನಿರ್ದೇಶನಗಳನ್ನು ರೂಪಿಸುವ ಅಗತ್ಯವಿದೆ. ಆದರೆ, ಅದಷ್ಟೇ ಸಾಕಾಗುವುದಿಲ್ಲ. ಕೆಲವು ಸ್ಥಳೀಯ ಕಾರ್ಯಯೋಜನೆಗಳನ್ನೂ ಹಮ್ಮಿಕೊಳ್ಳುವ ಅಗತ್ಯತೆ ಇದೆ.

ಆದ್ದರಿಂದ ದಯಾನಿಲಯ ವಿಶೇಷ ಶಾಲೆ ಕುಮಟಾ, ಪುರಸಭೆ ಕುಮಟಾ, ಪುರಸಭಾ ವ್ಯಾಯಾಮ ಶಾಲೆ ಕುಮಟಾ, ಎನ್.ಎಸ್.ಎಸ್ ಘಟಕ ಡಾ. ಎ. ವಿ. ಬಾಳಿಗಾ ವಾಣಿಜ್ಯ ಕಾಲೇಜ್, ಕುಮಟಾ ಇವರ ಸಹಯೋಗದೊಂದಿಗೆ ಸಮುದ್ರ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಮೂಲಕ ತ್ಯಾಜ್ಯವು ಯಾವ ಯಾವ ಮೂಲಗಳಿಂದ ಸಮುದ್ರ ಸೇರುತ್ತಿದೆ ಎಂಬುದನ್ನು ಅರಿಯಲು ತ್ಯಾಜ್ಯ ಪರಿಶೋಧನೆಯನ್ನೂ ಮಾಡುತ್ತಿದ್ದೇವೆ. ಮಾಧ್ಯಮಗಳ ಮೂಲಕವೂ ಜನ ಜಾಗೃತಿಯನ್ನು ಮೂಡಿಸಿ ತ್ಯಾಜ್ಯ ನೀರಿನಲ್ಲಿ ವಿಸರ್ಜಿಸುವ ರೂಢಿಗತ ಅಭ್ಯಾಸವನ್ನು ಬದಲಾಯಿಸುವ ಪ್ರಯತ್ನ ನಮ್ಮದು.

ದಯಾನಿಲಯದ ವಿಶೇಷ ಚೇತನ ಮಕ್ಕಳು "ನಾವು ಸ್ವಚ್ಚಪಡಿಸಲು ಸಾಧ್ಯವಾಗಬಹುದಾದರೇ ನೀವು ಕಸವನ್ನು ಮನಬಂದಂತೆ ಚಲ್ಲುವುದನ್ನು ನಿಲ್ಲಿಸಲು ಸಾಧ್ಯವಿಲ್ಲವೇ?" ಎಂಬ ಗಂಭೀರ ಪ್ರಶ್ನೆಯನ್ನು ನಮಗೆಲ್ಲರಿಗೂ ಕೇಳುವ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿದ್ದಾರೆ.

ಒಂದು ಸಲ ಸಾಗರದ ತಳಾತಳವನ್ನು ಸೇರಿದ ತ್ಯಾಜ್ಯವನ್ನು ಯಾವುದೇ ಮನುಷ್ಯ ಪ್ರಯತ್ನದಿಂದ ಮತ್ತೆ ಹೊರತೆಗೆಯಲು ಅಸಾಧ್ಯ. ತರುವಾಯದ ಪರಿಣಾಮಗಳನ್ನು ಉಪ್ಪು ತಿಂದ ಮೇಲೆ ನೀರು ಕುಡಿಯಬೇಕು ಎಂಬಂತೆ ಅನುಭವಿಸುವುದು ನಮ್ಮ ಕರ್ಮಫಲ.

# ಹಿನ್ನಲೆ

ಜೀವಿಗಳ ಸ್ವಾಸ್ಥ್ಯ ಸಮೃದ್ಧಿ ಹಾಗೂ ಸುರಕ್ಷತೆ ಸಮುದ್ರದ ಸ್ವಾಸ್ಥ್ಯ ಹಾಗೂ ಸುರಕ್ಷತೆಯೊಂದಿಗೆ ತಳಕು ಹಾಕಿಕೊಂಡಿದೆ. ಸಮುದ್ರಗಳಿಗೆ ತ್ಯಾಜ್ಯ ವಿಸರ್ಜನೆ, ಮಿತಿ ಮೀರಿದ ಮೀನುಗಾರಿಕೆ ಹೀಗೆ ಹತ್ತು ಹಲವು ಭೀತಿಗಳು ಕಾಡುತ್ತಿವೆ. ಆದರೆ ಖುಷಿ ಪರಿಸರವು ಸಮುದ್ರ ಸೇರುತ್ತಿರುವ ಕೊಳೆಯದ ಘನ ತ್ಯಾಜ್ಯ ಅದರಲ್ಲು ವಿಶೇಷವಾಗಿ  ಪ್ಲಾಸ್ಟಿಕ್ ತ್ಯಾಜ್ಯದ ಒಳಹರಿವನ್ನು ತಡೆಯಲು ಪರಿಹಾರಗಳನ್ನು ಹುಡುಕುವಲ್ಲಿ ಕಾರ್ಯಪ್ರವೃತ್ತವಾಗಿದೆ.

ಸಮುದ್ರ ಸೇರಿದ ಪ್ಲಾಸ್ಟಿಕ್ ಛಿದ್ರಗೊಳ್ಳುತ್ತಾ, ಸಮುದ್ರದಲ್ಲಿ ಈಗಾಗಲೇ ಇರುವ ಕೈಗಾರಿಕಾ ಹಾಗೂ ಕೃಷಿಯಲ್ಲಿ ಉಪಯೋಗಿಸಿದ ರಾಸಾಯನಿಕಗಳೊಂದಿಗೆ ಸೇರಿ ವಿಷಯುಕ್ತ ಸಣ್ಣ-ಸಣ್ಣ ತುಣಕುಗಳಾಗಿ ಮಾರ್ಪಡುತ್ತಿದೆ.  ಇದು ಮೀನು, ಏಡಿ, ಮೃದ್ವಂಗಿ, ಸೀಗಡಿ, ಮುಂತಾದವುಗಳ ಆಹಾರದಲ್ಲಿ ಕಲಬೆರಕೆಯಾಗಿ ಅವುಗಳ ಹೊಟ್ಟೆ ಸೇರಿ ಆಹಾರಕೊಂಡಿಯ ಮೂಲಕ ಪುನಃ ನಮ್ಮನ್ನು ತಲುಪುತ್ತಿದೆ.

ನಮ್ಮ ಸಮುದ್ರಗಳು ಸರಿಪಡಿಸಲಾಗದ ಅಪಾಯಕರ ಪರಿಸ್ಥಿತಿಯನ್ನುತಲುಪುವ ಮೊದಲೇ, ಪ್ರಪಂಚದಾದ್ಯಂತ ಹಲವಾರು ಸರ್ಕಾರೇತರ ಸಂಸ್ಥೆಗಳು ಸರ್ಕಾರಗಳ ಮೇಲೆ ಕೆಲವು ಕಾರ್ಯ ನೀತಿಗಳನ್ನು ಜಾರಿಗೆ ತರುವಂತೆ ಒತ್ತಾಯ ಹೇರುತ್ತಿದೆ. ಈ ಕಾರ್ಯನೀತಿಗಳು ಇಂತಿವೆ.

1. ಪ್ಲಾಸ್ಟಿಕ್ ಕಡಿತಗೊಳಿಸುವ ನೀತಿ.
2. ಕೈಗಾರಿಕೊತ್ಪನ್ನಗಳ ಪ್ಯಾಕೇಜಿಂಗ್‌ನಲ್ಲಿ ಬಳಸುವ ಪ್ಲಾಸ್ಟಿಕ್‌ನ್ನು ಕಡಿತಗೊಳಿಸುವುದು ಮತ್ತು ಪ್ಯಾಕೇಜಿಂಗ್‌ನ್ನು ಮರುವಿನ್ಯಾಸಗೊಳಿಸುವುದು.
3. ಬಳಕೆದಾರರು ಒಮ್ಮೆ ಉಪಯೋಗಿಸಿ ಬಿಸಾಕುವ ಅಭ್ಯಾಸವನ್ನು ಬದಲಾಯಿಸಲು ಕರೆ ನೀಡುವುದು.

**ಭಾರತ ಸರ್ಕಾರವನ್ನು ಖುಷಿ ಪರಿಸರವು ಈಗ ತುರ್ತಾಗಿ ಒತ್ತಾಯಿಸುವುದೇನೆಂದರೆ:-**

1. ಸಮುದ್ರ ತ್ಯಾಜ್ಯ ವಿಸರ್ಜನೆಗೆ ಸಂಬಂಧಪಟ್ಟಂತೆ ವಿಸ್ತೃತ ಕಾಯ್ದೆಗಳನ್ನು ಅನುಷ್ಠಾನಗೊಳಿಸುವುದು.
2. ಚರಂಡಿ, ಸಮುದ್ರ ತೀರ, ನೀರಿನ ಒಳಹರಿವುಗಳು, ನದಿಗಳು ಹಾಗೂ ಇತರೇ ನೀರಿನ ಹರಿವುಗಳ ಸ್ವಚ್ಛತಾ ಕಾರ್ಯವನ್ನು ವ್ಯಾಪಕವಾಗಿ ಹಮ್ಮಿಕೊಳ್ಳುವುದು.
3. ಪರಿಸರಕ್ಕೆ ಆಗುತ್ತಿರುವ ದುಷ್ಪರಿಣಾಮವನ್ನು ಸರಿಪಡಿಸಲು ವೈಯಕ್ತಿಕ ನಡುವಳಿಕೆಯಲ್ಲಿ ಬದಲಾವಣೆಗಳನ್ನು ತಂದುಕೊಳ್ಳಲು ಕರೆ ನೀಡುವುದು.

ಇಂತಹ ಒಂದು ಹಿನ್ನಲೆಯೊಂದಿಗೆ ಹಾಗೂ ಕಳೆದ ಜೂನ್‌ನಲ್ಲಿ ನಡೆದ ವಿಶ್ವ ಸಂಸ್ಥೆಯ ಅಧಿವೇಶನದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ 14.2 ರಂತೆ ಸಮುದ್ರ ಮಾಲಿನ್ಯವನ್ನು ಗಮನಾರ್ಹವಾಗಿ ಇಳಿಸಲು ಕೊಟ್ಟ ಕರೆಗೆ ಪ್ರತಿಸ್ಪಂಧಿಸಿ ಖುಷಿ ಪರಿಸರವು ಸ್ವಯಂಪ್ರೇರಿತ ಬದ್ಧತೆಯೊಂದಿಗೆ ಸಮುದ್ರದಲ್ಲಿ ತ್ಯಾಜ್ಯ ವಿಲೇವಾರಿ ಮಾಡುವುದರಿಂದ ಉಂಟಾಗುವ ಆಘಾತಕಾರಿ ಪರಿಣಾಮಗಳ ಬಗ್ಗೆ ಜನಜಾಗೃತಿಯನ್ನು ಮೂಡಿಸಲು ಹಾಗೂ ಸಮುದ್ರ ರಕ್ಷಣೆಗೆ ಸೂಕ್ತ ಕರಾವಳಿ ಸಾಮರ್ಥ್ಯಾಭಿವೃದ್ಧಿ ಪಡಿಸಲು ಜಿಲ್ಲಾಡಳಿತವನ್ನು ಒತ್ತಾಯಿಸಲು ಮತ್ತು ಕೇಂದ್ರ ಸರ್ಕಾರಕ್ಕೆ ಸಮುದ್ರ  ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಸೂಕ್ತ ನೀತಿಗಳನ್ನು ಜಾರಿಗೊಳಿಸಲು ಮನವಿ ಮಾಡಿಕೊಳ್ಳುತ್ತಿದೆ.

**ಮೈಲಿಗಲ್ಲುಗಳು :**

1. 2018 ರೊಳಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಮುದ್ರ ತ್ಯಾಜ್ಯ ಹಾಗೂ ಸಮುದ್ರ ಸಾಕ್ಷರತೆಗೆ ಸಂಬಂಧಿಸಿದ ಸೂಕ್ತ ನೀತಿಗಳ ತಳಹದಿಯನ್ನು ಹಾಕುವುದು.

2. ಘನ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ – 2016 ರ ನಿಯಮಗಳನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವುದು.

3. ನದೀ ಮುಖಗಳು, ಹಿನ್ನೀರು ಹಾಗೂ ಅಳಿವೆಗಳು ಸಮುದ್ರ ಸೇರುವ ಜಾಗದಲ್ಲಿ ಮುಂಗಾರಿನ ಮಳೆಗೆ ಕೊಚ್ಚಿಕೊಂಡು ಬರುವ ಪ್ಲಾಸ್ಟಿಕ್ ಮತ್ತಿತರ ಕೊಳೆಯದ ತ್ಯಾಜ್ಯಗಳನ್ನು ಸಮುದ್ರಕ್ಕೆ ಸೇರದಂತೆ ತಡೆಯಲು ಸೂಕ್ತ ಶೋಧಕ ತಡೆಗಳನ್ನು 2018 ರ ಮುಂಗಾರಿನ ಪ್ರಾರಂಭದೊಳಗಾಗಿ ಅಳವಡಿಸುವುದು.

4. ಮೀನುಗಾರಿಕೆಯಲ್ಲಿ ಉಪಯೋಗಿಸುವ ಉಪಕರಣ, ಸಾಮಾಗ್ರಿಗಳ ಸೂಕ್ತ ವಿಲೇವಾರಿಗೆ 2019ರೊಳಗಾಗಿ ಸರಿಯಾದ ವ್ಯವಸ್ಥೆ ಕಲ್ಪಿಸಿ ಕಾರ್ಯರೂಪಗೊಳಿಸುವುದು.

5. 2020ರೊಳಗೆ ಕರಾವಳಿ ಸಮುದಾಯಗಳಲ್ಲಿ ಸಂಪೂರ್ಣ ಸಮುದ್ರ ಸಾಕ್ಷರತೆಯನ್ನು ಸಾಧಿಸುವುದು.

**“ ಅರಣ್ಯಗಳು ನಮ್ಮ ಗೃಹದ ಹಸಿರು ಪುಪ್ಪುಸಗಳಾದರೆ, ಸಮುದ್ರಗಳು ಅದರ ನೀಲಿ ಹೃದಯ, ಈ ನೀಲಿ ಹೃದಯುವು ಸದಾ ಮಿಡಿಯುತ್ತಿರುವಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ”.**

ಸಮುದ್ರಗಳು ಭಾರತದ ಭಾಗವಲ್ಲವೇ? ಸ್ವಚ್ಛ ಭಾರತ ಅಭಿಯಾನ ಸಮುದ್ರಕ್ಕೆ ಅನ್ವಯಿಸುವುದಿಲ್ಲವೇ ? ಸಮುದ್ರಗಳ ತ್ಯಾಜ್ಯ ನಿರ್ವಹಣೆಗೆ ಸೂಕ್ತ ನೀತಿ, ನಿಯಮಗಳ ಅಗತ್ಯವಿಲ್ಲವೇ? ನಮ್ಮ ಸ್ವಚ್ಛಗೊಳಿಸುವ ಘನ ಸರ್ಕಾರವು ನಮ್ಮ ತ್ಯಾಜ್ಯ ಎಸೆಯುವ ಉಗ್ರ ಅಭ್ಯಾಸಗಳಿಗೆ ಸಮುದ್ರಗಳು ಸುಲಭವಾದ ಹಾಗೂ ಕಟ್ಟಕಡೆಯ ತ್ಯಾಜ್ಯ ವಿಲೇವಾರಿ ತಾಣಗಳು ಎಂಬುದನ್ನು ಯಾವಾಗ ಒಪ್ಪಿಕೊಳ್ಳುತ್ತದೆ ? ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಸರ್ಕಾರದ ವಿಳಂಬ ನೀತಿ ಹಾಗೂ ಅಪರಾಧ ಏರಿಕೆ ಇವೆರೆಡೂ ಸೇರಿ ನಮ್ಮ ಪರಿಸರದ ಮೇಲೆ ಅದರಲ್ಲೂ ಸಮುದ್ರಗಳ ಮೇಲೆ ಘಾತಕ ಪರಿಣಾಮಗಳನ್ನು ಬೀರುತ್ತಿದೆ. ನಮ್ಮ ಸರ್ಕಾರಗಳು ಹಾಗೂ ವ್ಯಾಪಾರೋದ್ಯಮಗಳು ನೈಸರ್ಗಿಕ ಬಂಡವಾಳದ ಮಹತ್ವವನ್ನು ಪರಿಗಣಿಸಲು ಇದು ಸೂಕ್ತ ಸಮಯ. ಏಕೆಂದರೆ ಆರ್ಥಿಕ ಅಭಿವೃದ್ಧಿ ಮಾನವ ಅಭಿವೃದ್ಧಿ ಎಂದಲ್ಲ. ಪರಿಸರಕ್ಕೆ ಆದ್ಯತೆ ಕೊಡುವುದರಿಂದ ಮಾತ್ರ ಮಾನವನ ಅಭಿವೃದ್ಧಿ ಆಗಲು ಸಾಧ್ಯ.

Our Ocean Our Health

Save Ocean!